# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 20(06) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಔಷಧ ನಿಯಂತ್ರಣ ಇಲಾಖೆಯ ವ್ಯಾಪ್ತಿಗೆ ಸರ್ಕಾರಿ ಮತ್ತು ಖಾಸಗಿಯ ಎಷ್ಟು ಔಷಧ ಮಳಿಗೆಗಳು ಬರುತ್ತದೆ; ಇವುಗಳಲ್ಲಿ ಸಗಟು ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) | ಕೋಲಾರ ಜಿಲ್ಲೆಯಲ್ಲಿ ಔಷಧ ನಿಯಂತ್ರಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಮತ್ತು ಖಾಸಗಿ ಔಷಧ ಮಳಿಗೆಗಳ ತಾಲ್ಲೂಕುವಾರು ವಿವರ: (see table below) |

| ಕ್ರ. ಸಂ | ತಾಲ್ಲೂಕಿನ ಹೆಸರು | ಚಿಲ್ಲರೆ ಔಷಧ ಮಾರಾಟ ಮಳಿಗೆಗಳ ಸಂಖ್ಯೆ | ಸಗಟು ಔಷಧ ಮಾರಾಟ ಮಳಿಗೆಗಳ ಸಂಖ್ಯೆ | ಸರ್ಕಾರಿ ಔಷಧ ವಿತರಣಾ ಕೇಂದ್ರುಗಳು |
|---|---|---|---|---|
| 1 | ಕೋಲಾರ | 193 | 76 | 19 |
| 2 | ಬಂಗಾರಪೇಟೆ | 188 | 31 | 14 |
| 3 | ಮಾಲೂರು | 115 | 13 | 15 |
| 4 | ಮುಳುಬಾಗಿಲು | 112 | 10 | 10 |
| 5 | ಶ್ರೀನಿವಾಸಪುರ | 67 | 06 | 20 |
| | **ಒಟ್ಟು** | **675** | **136** | **78** |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಆ) | ಔಷಧ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಇರುವ ನೀತಿ ನಿಯಮಗಳೇನು; | ಔಷಧ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳು 1945ರ ನಿಯಮ 61ರಿಂದ 64ರಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತದೆ. |

<table>
<tr><td>ಇ)</td><td>ಔಷಧ ಮಾರಾಟ ಮಳಿಗೆಗಳು ಸರ್ಕಾರದ ನೀತಿ ನಿಯಮದಡಿಯಲ್ಲಿ ಪ್ರಾಮಾಣಿಕವಾಗಿ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲನೆ ನಡೆಸಲು ಸರ್ಕಾರ ಅಧಿಕಾರಿಗಳನ್ನು ನೇಮಿಸಿದೆಯೇ; ನೇಮಿಸಿದ್ದಲ್ಲಿ ಅಂತಹ ಅಧಿಕಾರಿ ಹಾಗೂ ಅವರ ತಂಡದ ವಿವರಗಳನ್ನು ಒದಗಿಸುವುದು;</td><td rowspan="2">ಎಷ್ಟು ಔಷಧ ಮಾರಾಟ ಮಳಿಗೆಗಳಿಗೆ ಅನುಗುಣವಾಗಿ ಎಷ್ಟು ಔಷಧ ಪರಿವೀಕ್ಷಕರುಗಳ ಹುದ್ದೆ ಇರಬೇಕು ಎನ್ನುವ ಅನುಪಾತವನ್ನು ನಿಗದಿಪಡಿಸಿರುವುದಿಲ್ಲ. ಆದರೆ ಜಿಲ್ಲೆಗಳಲ್ಲಿ ಇರುವ ಔಷಧ ಮಾರಾಟ ಮಳಿಗೆಗಳ ಅನುಗುಣವಾಗಿ ಔಷಧ ಪರಿವೀಕ್ಷಕರುಗಳ ಮತ್ತು ಸಹಾಯಕ ಔಷಧ ನಿಯಂತ್ರಕರುಗಳ ಹುದ್ದೆಗಳನ್ನು ಸೃಜಿಸಲಾಗಿದೆ.</td></tr>
<tr><td>ಈ)</td><td>ಎಷ್ಟು ಮಾರಾಟ ಮಳಿಗೆಗಳಿಗೆ ಅನುಗುಣವಾಗಿ ಎಷ್ಟು ಔಷಧ ಪರಿವೀಕ್ಷಕರುಗಳ ಹುದ್ದೆ ಇರಬೇಕಾಗಿದೆ;</td></tr>
<tr><td>ಉ)</td><td>ಕೋಲಾರ ಜಿಲ್ಲೆಗೆ ಪ್ರಸ್ತುತ ಎಷ್ಟು ಹುದ್ದೆಗಳನ್ನು ಸರ್ಕಾರ ಮಂಜೂರು ಮಾಡಿದೆ; ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು;</td><td>ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಔಷಧ ಪರಿವೀಕ್ಷಕರ ಹಾಗೂ ಸಹಾಯಕ ಔಷಧ ನಿಯಂತ್ರಕರ ಹುದ್ದೆಗಳ ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಪದನಾಮ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>1</td><td>ಸಹಾಯಕಔಷಧ ನಿಯಂತ್ರಕರು</td><td>01</td><td>01</td><td>0</td></tr>
<tr><td>2</td><td>ಔಷಧ ಪರಿವೀಕ್ಷಕರು</td><td>02</td><td>0</td><td>02</td></tr>
</table></td></tr>
<tr><td>ಊ)</td><td>ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?</td><td>ಔಷಧ ಪರಿವೀಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಿ ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪಟ್ಟಿಯನ್ನು ಔಷಧ ನಿಯಂತ್ರಣ ಇಲಾಖೆಗೆ ಕಳುಹಿಸಿರುತ್ತದೆ. ಸದರಿ ಆಯ್ಕೆ ಪಟ್ಟಿಯನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ WP:107575/2021 ಪ್ರಕರಣವು ದಾಖಲಾಗಿರುತ್ತದೆ. ಮಾನ್ಯ ನ್ಯಾಯಾಲಯವು ದಿನಾಂಕ:24.06.2021ರಂದು ತಡೆಯಾಜ್ಞೆ ನೀಡಿದ್ದು, ವಿಚಾರಣೆ ಕೈಗೊಂಡು ತೀರ್ಪಿಗಾಗಿ ಕಾಯ್ದಿರಿಸಲಾಗಿದೆ. ಮಾನ್ಯ ಉಚ್ಛ ನ್ಯಾಯಲಯದ ತೀರ್ಪನ್ನು ನಿರೀಕ್ಷಿಸಲಾಗಿದೆ.</td></tr>
</table>

**ಸಂಖ್ಯೆ: ಆಕುಕ 30 ಪಿಟಿಡಿ 2023**

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು